ಹಸಿರು ಕಾರ್ಡ್ ವಿತರಣೆಯಲ್ಲಿ ಅನ್ಯಾಯ

೪೬೧. ಶ್ರೀ ಎ. ಕೃಷ್ಣಪ್ಪ (ವರ್ತೂರು).–ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಸಿರು ಕಾರ್ಡು ವಿತರಣೆಯಲ್ಲಿ ಹರಿಜನ ಗಿರಿಜನ ಹಾಗೂ ದುರ್ಬಲ ವರ್ಗದವರಿಗೆ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ಪಾಟೀಲ್ ಅನ್ವರಿ(ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) –

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳ ಚಕ್ರಗಳಿಗೆ ರೀಟ್ರೇಡಿಂಗ್ ಕೆಲಸದ ಬಗ್ಗೆ

೪೬೩. ಶ್ರೀ ಎ. ಕೃಷ್ಣಪ್ಪ, (ವರ್ತೂರು).–ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳ ಚಕ್ರಗಳಿಗೆ ಸಂಬಂಧಿಸಿದಂತೆ ರೀಟ್ರೇಡಿಂಗ್ ಕೆಲಸಗಳನ್ನು ಯಾವ ಸಂಸ್ಥೆಯವರಿಂದ ಮಾಡಿಸಲಾಗುತ್ತಿದೆ ?

ಆ) ಇದಕ್ಕಾಗಿ ವರ್ಷಂಪ್ರತಿ ತಗಲುವ ವೆಚ್ಚವೆಷ್ಟು ?

ಇ) ಸಂಸ್ಥೆಯು ತನ್ನದೇ ಆದ ರೀಟ್ರೇಡಿಂಗ್ ಘಟಕವನ್ನು ಹೊಂದಿದೆಯೇ, ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಹಾಗೂ ಎಲ್ಲೆಲ್ಲಿ ಇವೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು).—

ಅ) ಟೈರ್ ರೀಟ್ರೇಡಿಂಗ್ ಕೆಲಸವನ್ನು ನಾಲ್ಕು ಅಧೀನ ಸಂಸ್ಥೆಗಳಿಗೂ ಮತ್ತು ಹದಿಮೂರು ಖಾಸಗೀ ರೀಟ್ರೇಡರ್ಸ್‌ಗಳಿಗೂ ವಹಿಸಲಾಗಿದೆ.

ಆ) ಐದು ವರ್ಷಗಳಲ್ಲಿ ಆದ ವೆಚ್ಚ ರೂ. ೧೪,೬೧,೭೬,೩೫೭–೦೦ ಗಳು

ಇ) ಇವೆ. ಒಂಬತ್ತು ಟೈರ್ ರೀಟ್ರೇಡಿಂಗ್ ಘಟಕಗಳಿವೆ. ಒಂದು ಘಟಕದ ಸ್ಥಾಪನೆ ಅಂತಿಮ ಘಟ್ಟದಲ್ಲಿದೆ. ಹುಬ್ಬಳ್ಳಿಯ ಪ್ರಾದೇಶಿಕ ಕಾರ್ಯಾಗಾರದಲ್ಲಿಯೂ ಸಹ ಒಂದು ಹಾಟ್ ಪ್ರೋಸಸ್ ಕನ್ವೆಂಷನಲ್ ಘಟಕ ಕಾರ್ಯ ನಿರ್ವಹಿಸುತ್ತಲಿದೆ.

ಸಚಿವಾಲಯದ ವಿವಿಧ ವೃಂದ ಹುದ್ದೆಗಳನ್ನು ಭಡ್ತಿಯಿಂದ ತುಂಬುವ ಬಗ್ಗೆ

೪೬೧. ಶ್ರೀ ಎ. ಕೃಷ್ಣಪ್ಪ (ವರ್ತೂರು) –ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಕಾರ್ಯದರ್ಶಿಯವರಿಂದ ಕಿರಿಯ ಸಹಾಯಕ ಹುದ್ದೆಗಳವರೆಗಿನ ಮಾಹಿತಿಯನ್ನು ನೀಡುವುದು?

ಆ) ಈ ಹುದ್ದೆಗಳು ಎಂದಿನಿಂದ ಖಾಲಿ ಇವೆ ?

ಇ) ಹುದ್ದೆಗಳನ್ನು ಬಡ್ತಿ ನೀಡುವುದರ ಮೂಲಕ ತುಂಬದಿರಲು ಕಾರಣವೇನು ?

ಈ) ಸರ್ವೋಚ್ಚ ನ್ಯಾಯಾಲಯ ಉಚ್ಚ ನ್ಯಾಯಾಲಯಗಳ ತೀರ್ಪು ಬಂದರೂ ಸಚಿವಾಲಯದ ಸಹಾಯಕರ ಶಾಖಾಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸದೆ ಇರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇನು? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?